ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೧೦ | ಫೆಬ್ರವರಿ ೨೦೧೯ | ಸಂಚಿಕೆ ೩



ಮರಣ: ೧೭ ಫೆಬ್ರವರಿ ೧೯೮೬

"ಪುನರುತ್ಥಾನವಿಲ್ಲ, ಅದೊಂದು ಮೂಢನಂಬಿಕೆ, ಮತಶ್ರದ್ಧೆಯ ನಂಬಿಕೆ. ಈ ಪೃಥ್ವಿಯ ಮೇಲಿನ ಸಕಲವೂ ಈ ಸುಂದರ ಭೂಮಿಯ ಮೇಲಿನ ಎಲ್ಲವೂ ಬದುಕುತ್ತವೆ, ಸಾಯುತ್ತವೆ, ಮೂಡುತ್ತವೆ, ಮುದುಡುತ್ತವೆ, ಉದುರುತ್ತವೆ. "

THE LIFE AND DEATH OF KRISHNAMURTI

ನಮ್ಮ ಬಹಳಷ್ಟು ಸಂಬಂಧಗಳು ಯಥಾರ್ಥವಾಗಿ ಈ ಬಿಂಬರೂಪಣೆಯನ್ನು ಅವಲಂಬಿಸಿವೆ. ಈ ಬಿಂಬ ರೂಪಣೆಯಿಂದ ಮುಕ್ತವಾದಾಗ ಮಾತ್ರವೇ ಸಂಬಂಧ ಇರುತ್ತದೆ. ಈ ಬಿಂಬವನ್ನು ಒಡೆದಾಗ, ಬಿಂಬ ರೂಪಣೆಯ ಪ್ರಕ್ರಿಯೆ ನಿಂತಾಗ ಸಂಘರ್ಷ ಕೊನೆಯಾಗುವುದು; ಸಂಘರ್ಷ ಸಂಪೂರ್ಣ ಕೊನೆಗೊಳ್ಳುವುದು. ಆಗ ಮಾತ್ರವೇ ಒಳಗೂ ಹೊರಗೂ ಶಾಂತಿ ನೆಲೆಸುತ್ತದೆ. ನೀವು ಆ ಶಾಂತಿಯನ್ನು ನಿಮ್ಮ ಮನಸ್ಸಿನಲ್ಲಿ ಸ್ಥಾಪಿಸಿದಾಗ, ಅಂತರಂಗದಲ್ಲಿ ಮುಕ್ತರಾದಾಗ ಬಲು ದೂರ ಸಾಗಬಲ್ಲಿರಿ.

ಸ್ವಾಮಿ, ಮನಸ್ಸಿನಲ್ಲಿ ಸಂಘರ್ಷವಿಲ್ಲದಿದ್ದರೆ ಸ್ವಾತಂತ್ರ್ಯವಿರುತ್ತದೆ. ನಮ್ಮಲ್ಲಿ ಬಹಳಷ್ಟು ಮಂದಿ ಸಾಯುವತನಕ ಸಂಘರ್ಷಪೀಡಿತರು. ತೊಳಲಾಡುತ್ತಿರುತ್ತೇವೆ. ನೀವು ಸಮ್ಮೋಹಿನಿಗೆ ಒಳಗಾಗುತ್ತೀರಿ ಅಥವಾ ಯಾವುದಾದರೊಂದು ಉದ್ದೇಶದ ಜತೆಗೆ, ಒಂದು ಬದ್ಧತೆ ಜತೆಗೆ, ಒಂದು ದರ್ಶನ, ಪಂಥ, ಶ್ರದ್ಧೆಯ ಜತೆಗೆ ಗುರುತಿಸಿಕೊಳ್ಳುತ್ತೀರಿ. ಈ ಗುರುತಿಸುವಿಕೆಯಿಂದಾಗಿ ಮಂತ್ರಮುಗ್ಧರಾಗುತ್ತೀರಿ; ಒಂದು ಬಗೆಯ ಮಂಪರಿನಲ್ಲಿ ಬದುಕುತ್ತೀರಿ. ನಮ್ಮಲ್ಲಿ ಹೆಚ್ಚಿನವರು ತೊಳಲಾಟದಲ್ಲಿದ್ದೇವೆ. ಈ ಸಂಘರ್ಷದ ಕೊನೆಯೇ ಬಿಡುಗಡೆ - ಸ್ವಾತಂತ್ರ್ಯ. ಸಂಘರ್ಷವಿದ್ದಲ್ಲಿ ಬಿಡುಗಡೆ ಸಿಗದು. ನೀವು ಬಯಸಬಹುದು, ಅಪೇಕ್ಷಿಸಬಹುದು, ಆದರೆ ನೀವೆಂದಿಗೂ ಅದನ್ನು ಪಡೆಯಲಾರಿರಿ.

ಸಂಬಂಧ ಎಂದರೆ ಬಿಂಬವನ್ನು ರೂಪಿಸುವ ಯಾಂತ್ರಿಕತೆಯನ್ನು ಕೊನೆಗೊಳಿಸುವುದು ಮತ್ತು ಆ ಕೊನೆಗೊಳಿಸುವಿಕೆಯೊಂದಿಗೆ ಸರಿಯಾದ ಸಂಬಂಧವನ್ನು ಸ್ಥಾಪಿಸುವುದು. ಇದರಿಂದಾಗಿ ಸಂಘರ್ಷವೂ ಕೊನೆಗೊಳ್ಳುತ್ತದೆ. ಸಂಘರ್ಷ ಕೊನೆಯಾದಾಗ ಬಿಡುಗಡೆ ದೊರೆಯುತ್ತದೆ, ನಿಶ್ಚಯವಾಗಿಯೂ ಸ್ವಾತಂತ್ರ್ಯವು ವಿಚಾರವಾಗಿಯಲ್ಲ ಯಥಾರ್ಥವಾಗಿ ಲಭಿಸುತ್ತದೆ. ಆಮೇಲೆ ಆ ಬಿಡುಗಡೆಯ ಸ್ಥಿತಿಯಲ್ಲಿ ವಿಕೃತಗೊಂಡಿರದ, ಹಿಂಸೆಗೆ ಒಳಗಾಗದ, ಪೂರ್ವಾಗ್ರಹ ಪೀಡಿತವಾಗಿರದ, ಯಾವುದೇ ಭ್ರಮೆ, ಮಾಯೆ, ಅನುಭಾವಿಕ ಪರಿಕಲ್ಪನೆ ಅಥವಾ ದರ್ಶನಕ್ಕೆ ಪಕ್ಕಾಗಿರದ ಮನಸ್ಸು ಬಲುದೂರ ಸಾಗಬಹುದು. ದೂರವೆಂಬುದು ಕಾಲ ಅಥವಾ ಸ್ಥಳಾವಕಾಶದ ನೆಲೆಯಲ್ಲಿ ಅಲ್ಲ; ಬಿಡುಗಡೆ ಇರುವಲ್ಲಿ ಕಾಲ, ದೇಶಗಳಿಲ್ಲ. 'ಬಲುದೂರ' ಎಂಬ ಪದಗಳಿಗೆ ಯಾವ ಅರ್ಥವೂ ಇಲ್ಲ ಎಂಬುದನ್ನು ಕಂಡುಕೊಳ್ಳಬಹುದು ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ, ಆ ಬಿಡುಗಡೆಯಲ್ಲಿ ಶೂನ್ಯತೆಯ ಒಂದು ಸ್ಥಿತಿ ಇದೆ, ಆನಂದದ, ಪರಮಾನಂದದ ಸ್ಥಿತಿ ಇದೆ, ಇದನ್ನು ಯಾವ ದೇವರೂ ಯಾವ ಧರ್ಮವೂ ಯಾವ ಗ್ರಂಥವೂ ನಿಮಗೆ ನೀಡಲಾರದು.

ಆದುದರಿಂದಲೇ ನೀವು ಮತ್ತು ನಿಮ್ಮ ಹೆಂಡತಿ, ನಿಮ್ಮ ನೆರೆಹೊರೆ, ನಿಮ್ಮ ಸಮಾಜ, ನೀವು ಮತ್ತು ಇತರ ಜನರು ಇವರ ನಡುವೆ ಈ ಸಂಬಂಧ ಸ್ಥಾಪನೆಯಾಗದ ಹೊರತು ನಿಮಗೆ ಶಾಂತಿ ದೊರೆಯದು, ಬಿಡುಗಡೆ ದೊರೆಯದು. ಓರ್ವ ಮಾನವನಾಗಿ, ವ್ಯಕ್ತಿಯಾಗಿಯಲ್ಲ ನೀವು ಸಮಾಜವನ್ನು ಪರಿವರ್ತನೆ ಮಾಡಬಹುದು. ಸಮಾಜವಾದಿ, ಸಮತಾವಾದಿ - ಯಾರೂ ಇದನ್ನು ಮಾಡಲಾರರು. ಸರಿಯಾದ, ಸಮರ್ಪಕವಾದ ಸಂಬಂಧ ಎಂದರೆ ಏನು ಎಂದು ಅರಿತ ಮನುಷ್ಯ ಮಾತ್ರವೇ ಅಂಥ ಮನುಷ್ಯ ಮಾತ್ರವೇ ಸಂಘರ್ಷವಿಲ್ಲದೆ ಬದುಕಬಹುದಾದ ಮಾನವ ಸಮಾಜವನ್ನು ನಿರ್ಮಿಸಬಲ್ಲ.

---

**ಕೃತಿ: ಜೀವನ ಪಾಠಗಳು**
**ಮೂಲ: Teachings of life**
**ಅನುವಾದ: ಮಹಾಬಲೇಶ್ವರ ರಾವ್**



*“ಸುಪ್ತಪ್ರಜ್ಞೆಯು ಹಲವು ಸಾವಿರ ವರ್ಷಗಳ ಭೂತ. ಅದು ಜನಾಂಗದ, ಕುಟುಂಬದ, ಶೇಖರಗೊಂಡ ಜ್ಞಾನದ ಅವಶೇಷ. ಸುಪ್ತಪ್ರಜ್ಞೆ ಎಂಬುದು ನೀವು ಪ್ರಜ್ಞಾಪೂರ್ವಕ ನಿರಾಕರಿಸಬಹುದಾದ ಒಟ್ಟು ಪರಂಪರೆ; ಆದರೆ ಅದು ಇದೆ. ಕಷ್ಟಕ್ಕೊಳಗಾದಾಗ ಅದು ನಮಗೆ ಪ್ರಮಾಣವಾಗುತ್ತದೆ.”*

Teachings of life: J Krishnamurti

ಶಿಕ್ಷಣ? ಹಾಗಂದರೇನು? ನಾವು ಓದಲು ಬರೆಯಲು ಕಲಿಯುತ್ತೇವೆ, ಜೀವನ ನಿರ್ವಹಣೆಗೆ ಅಗತ್ಯವಾದ ಒಂದು ತಂತ್ರವನ್ನು ಗಳಿಸುತ್ತೇವೆ, ಆಮೇಲೆ ಈ ಜಗತ್ತಿನಲ್ಲಿ ನಮಗೆ ಬೇಕಾದ ಹಾಗೆ ಬದುಕುತ್ತೇವೆ. ನಾವೇನು ಮಾಡಬೇಕು, ಏನನ್ನು ಯೋಚನೆ ಮಾಡಬೇಕು ಎಂದು ಬಾಲ್ಯದಿಂದಲೇ ನಮಗೆ ಹಿರಿಯರು ಹೇಳುತ್ತಾರೆ. ಸಮಾಜದ ಮತ್ತು ಪರಿಸರದ ಪ್ರಭಾವಗಳಿಂದಾಗಿ ನಾವು ಆಂತರ್ಯದಲ್ಲಿ ಗಾಢವಾದ ಅನುಬಂಧನಕ್ಕೆ ಒಳಪಟ್ಟಿರುತ್ತೇವೆ.

ಮನುಷ್ಯನನ್ನು ಹೊರಗಿನಿಂದ ಶಿಕ್ಷಿತನನ್ನಾಗಿ ಮಾಡಿ ಕೇಂದ್ರವನ್ನು ಹಾಗೆಯೇ ಬಿಟ್ಟು ಬಿಡಬಹುದೇ? ಮನುಷ್ಯ ಅಂತರಂಗದಲ್ಲಿ ಮುಕ್ತನಾಗಲು, ಸದಾ ಸ್ವತಂತ್ರನಾಗಿರಲು ನಾವು ಸಹಾಯ ಮಾಡಬಹುದೇ? ಎಂದು ನಾನು ಯೋಚಿಸುತ್ತಿದ್ದೆ. ಏಕೆಂದರೆ ಸ್ವಾತಂತ್ರ್ಯ ಇದ್ದಾಗ ಮಾತ್ರವೇ ಆತ ಸೃಜನಶೀಲನೂ, ಸಂತೋಷಭರಿತನೂ ಆಗಿರಲು ಸಾಧ್ಯ. ಹಾಗಲ್ಲದಿದ್ದರೆ, ಬದುಕೊಂದು ಹಿಂಸೆಯ, ಯಾತನೆಯ ವ್ಯವಹಾರ.

ಅದು ಒಳ ಹೊರಗೆ ನಡೆಯುವ ತುಮುಲ. ಆಂತರ್ಯದಲ್ಲಿ ಮುಕ್ತವಾಗಿರಲು ತಿವ್ರಭಾವದ ಕಳಕಳಿ ಮತ್ತು ವಿವೇಕ ಬೇಕು. ಕೆಲವೇಕೆಲವರು ಇದರ ಮಹತ್ತ್ವವನ್ನು ಮನಗಾಣುತ್ತಾರೆ. ನಾವು ಬಾಹ್ಯ ಸಂಗತಿಗಳ ಬಗ್ಗೆ ಕಳಕಳಿ ಉಳ್ಳವರಾಗಿದ್ದೇವೆಯೇ ಹೊರತು ಸೃಜನಶೀಲತೆಯ ಬಗ್ಗೆಯಲ್ಲ. ಇದೆಲ್ಲವನ್ನೂ ಬದಲಾಯಿಸಲು, ಇದರ ಅಗತ್ಯವನ್ನು ಮನಗಂಡಿರುವ ಸ್ವತಃ ತಮ್ಮೊಳಗೇ ಈ ಬಗೆಯ ಮುಕ್ತತೆಯನ್ನು ರೂಪಿಸುತ್ತಿರುವ ಕೆಲವರಾದರೂ ಬೇಕು. ಇದೊಂದು ವಿಚಿತ್ರ ಪ್ರಪಂಚ.

ಮುಖ್ಯವಾಗಿ ಬೇಕಾದದ್ದು ಸುಪ್ತಪ್ರಜ್ಞೆಯಲ್ಲಿ ಆಮೂಲಾಗ್ರವಾದ ಬದಲಾವಣೆ. ಚಿತ್ತದ ಯಾವುದೇ ಪ್ರಜ್ಞಾಪೂರ್ವಕ ಕ್ರಿಯೆ ಸುಪ್ತಪ್ರಜ್ಞೆಯನ್ನು ತಟ್ಟಲಾರದು. ಪ್ರಜ್ಞಾ ಸ್ಥಿತಿಯ ಚಿತ್ತ ಸುಪ್ತಪ್ರಜ್ಞೆಯ ಹುಡುಕಾಟಗಳನ್ನು, ತುಡಿತಗಳನ್ನು, ಬಯಕೆಗಳನ್ನು ಸ್ಪರ್ಶಿಸಲಾರದು. ಹೀಗಾಗಿ ಪ್ರಜ್ಞಾಸ್ಥಿತಿಯ ಮನಸ್ಸು ಹಿಂದೆ ಸರಿಯಬೇಕು, ನಿಶ್ಚಲವಾಗಬೇಕು.



ಮೊದಲನೆಯದಾಗಿ, ನಾನು ಯಾವುದೇ ಸಂಬಂಧವನ್ನು ಹೊಂದಿದ್ದೇನೆಯೇ, ಅಂದರೆ, ಸಂಪರ್ಕ, ಒಡನಾಟ, ಆತ್ಮೀಯತೆ ಎಬಂತಹ ಸಂಬಂಧವು ನನ್ನ ಮತ್ತು ನನ್ನ ಮಗನ ನಡುವೆ ಇದೆಯೇ? ನಿಜವಾಗಿಯೂ ನಮ್ಮ ನಡುವೆ ಅಂತಹದ್ದೇನಾದರೂ ಇದೆಯೇ? ಅಥವಾ, ನಾನೊಬ್ಬ ಪೋಷಕನಾಗಿ ಹಣ ಅಥವಾ ಮತ್ತೇನನ್ನೋ ಸಂಪಾದಿಸುವುದರಲ್ಲಿ ತುಂಬಾ ನಿರತನಾಗಿದ್ದು, ನಾನು ಅವನನ್ನು ಶಾಲೆಗೆ ಸಾಗಹಾಕುತ್ತಿದ್ದೇನೆಯೇ? ಹಾಗಾದರೆ ನನಗೆ ಹುಡುಗ ಅಥವಾ ಹುಡುಗಿಯ ಜೊತೆಗೆ ಯಾವುದೇ ಸಂಪರ್ಕ ಅಥವಾ ಸಂವಹನವೂ ಇಲ್ಲ. ಅಲ್ಲವೇ? ಸಾಮಾನ್ಯವಾಗಿ ಜನರು ತಮ್ಮ ಕಾರ್ಯದಲ್ಲಿ ಅತಿಯಾಗಿ ನಿರತರಾಗಿರುತ್ತಾರೆ, ಹಾಗೆಯೇ ನಾನೂ ಒಬ್ಬ ಕಾರ್ಯನಿರತ ಪೋಷಕನಾಗಿದ್ದರೆ, ಮತ್ತು ನಾನು ನನ್ನ ಮಗ ವಕೀಲನೋ ಅಥವಾ ಇನ್ನೇನೋ ಆಗಬೇಕೆಂದು ಬಯಸಿದರೆ, ನಾನೇ ಅವನನ್ನು ಹೆತ್ತು ಹೊತ್ತರು, ನಾನು ಅವನೊಂದಿಗೆ ಯಾವುದೇ ಸಂಬಂಧವನ್ನು ಹೊಂದಿದ್ದೇನೆಯೇ?

School without fear

ಯಾವುದೇ ಕ್ರಿಯೆಯ ಯಾವುದೇ ವಿನ್ಯಾಸವನ್ನು ಸುಪ್ತಪ್ರಜ್ಞೆಯ ಮೇಲೆ ಬಲವಂತದಿಂದ ಹೇರಬಾರದು. ಸುಪ್ತಪ್ರಜ್ಞೆಗೆ ಅದರದ್ದೇ ಆದ ವಿನ್ಯಾಸದ ಕ್ರಿಯೆ, ಅದರದ್ದೇ ಆದ ಚೌಕಟ್ಟು ಇದೆ. ಆ ಚೌಕಟ್ಟಿನ ಒಳಗೆ ಅದು ಕಾರ್ಯಾಚರಿಸುತ್ತದೆ. ಯಾವುದೇ ಬಾಹ್ಯ ಕ್ರಿಯೆಯಿಂದ ಈ ಚೌಕಟ್ಟನ್ನು ಭೇದಿಸಲಾಗದು, ಚಿತ್ತವೆಂಬುದು ಹೊರಗಿನ ಕ್ರಿಯೆ. ಇದನ್ನು ಸರಿಯಾಗಿ ಗಮನಿಸಿ ಅರಿತರೆ ಹೊರಗಿನ ಮನಸ್ಸು ನಿಶ್ಚಲವಾಗಿರುತ್ತದೆ.

ಚಿತ್ತದಿಂದ ಯಾವುದೇ ಪ್ರತಿರೋಧ ವ್ಯಕ್ತವಾಗದಿರುವುದರಿಂದಾಗಿ ತಥಾಕಥಿತ ಸುಪ್ತಪ್ರಜ್ಞೆ ತನ್ನದೇ ನಿರ್ಬಂಧಗಳಿಂದ ಮುಕ್ತವಾಗಲು ಹವಣಿಸುತ್ತದೆ. ಆಗ ಮಾತ್ರವೇ ಮಾನವನ ಒಟ್ಟು ಇರವಿನಲ್ಲಿ ಆಮೂಲಾಗ್ರವಾದ ಪರಿವರ್ತನೆ ಉಂಟಾಗುತ್ತದೆ.

---

**ಕೃತಿ:** ಏನೂ ಅಲ್ಲದವನೇ ಪರಮ ಸುಖಿ

**ಮೂಲ: Happy is the man who is nothing**

**ಅನುವಾದ:** ಮಹಾಬಲೇಶ್ವರ ರಾವ್

# ಶಿಕ್ಷಕನಿಗೂ ಶಿಕ್ಷಣದ ಅವಶ್ಯಕತೆ ಇದೆ.

**ಪೋ**: ಒಂದು ಸಾಮಾನ್ಯ ಮಗುವು ಖಂಡಿತವಾಗಿಯೂ ಸಮಾಜದ ಮಾದರಿಗೆ ಅನುಗುಣವಾಗಿರುತ್ತದೆ.

**ಕೆ**: ಸಾಮಾನ್ಯ ಮಗು ಎಂಬ ಪದವೇ ಇಲ್ಲ. ಭಯಭೀತನಾಗಿರುವ ಸಾಮಾನ್ಯ ಶಿಕ್ಷಕನಿರಬಹುದು. ಅದಕ್ಕಾಗಿಯೇ ಶಿಕ್ಷಕನಿಗೂ ಶಿಕ್ಷಣದ ಅವಶ್ಯಕತೆ ಇದೆ. ಅವನು ಸಮಾಜದೊಂದಿಗೆ ಕೇವಲ ಹೊಂದಾಣಿಕೆಯನ್ನು ಮಾಡಿಕೊಳ್ಳದೇ, ಅವನೂ ಸಹಾ ಬದಲಾಗಬೇಕು.

**ಪೋ**: ಸಮಾಜ ಮತ್ತು ಶಿಕ್ಷಕರು ನೇರವಾಗಿ ಸಹಾಯ ಮಾಡಲು ಸಾಧ್ಯವಿಲ್ಲ. ಅಂತಹ ಮಕ್ಕಳನ್ನು ಅವರ ಹಣೆಬರಹಕ್ಕೆ ಬಿಡಬೇಕಷ್ಟೇ. ಕೆಲವು ಮಕ್ಕಳು ಮಾತ್ರ ಇದನ್ನು ಮಾಡಬಹುದು.

**ಪೋ**: ನಮಗೆ ನಮ್ಮದೇ ಆದ ಮಿತಿಗಳಿದ್ದರೆ, ಅದನ್ನು ಮಗುವಿನ ಮೇಲೆ ಹೇರಲು ಅದು ಒಂದು ನೆಪವೇ?

**ಪೋ:** ಇದು ಹೇರುವಿಕೆಯಲ್ಲ. ಇದು ಅಸಹಾಯಕತೆ ಅಷ್ಟೇ.

**ಕೆ**: ಹಾಗಾದರೆ, ನಾವು ನಮ್ಮ ಮಿತಿಗಳನ್ನು ಮತ್ತು ನಮ್ಮ ಅಸಹಾಯಕತೆಯನ್ನು ತಿಳಿದುಕೊಳ್ಳಲು ಆಸಕ್ತರಾಗಿದ್ದರೆ, ಸರಿಯಾದ ಮಾದರಿಯ ಶಿಕ್ಷಣವನ್ನು ಹೇಗೆ ತರಬೇಕು?

**ಪೋ**: ಅದಕ್ಕಾಗಿಯೇ ನಾವು ಇಲ್ಲಿದ್ದೇವೆ. ನಾವು ಅದನ್ನು ನಿಮ್ಮಿಂದ ಕೇಳಲು ಬಯಸುತ್ತೇವೆ.

**ಕೆ**: ಶಿಕ್ಷಕ ಸ್ವತಃ ತಾನು ಶಿಕ್ಷಣವನ್ನು ಪಡೆಯದ ಹೊರತು, ಮಿತಿಗಳನ್ನು ಮುರಿಯಲು ಸಾಧ್ಯವಿಲ್ಲ, ಅಲ್ಲವೇ? ಅದೊಂದು ಅಗತ್ಯವಾದ ಅಂಶ. ಈಗ, ಶಿಕ್ಷಕನು ಸ್ವತಃ ಶಿಕ್ಷಣ ಪಡೆಯಲು ಸಿದ್ಧನಿದ್ದಾನೆಯೇ? ಅಂದರೆ, ನಿಜವಾಗಿಯೂ ಅವನು ತನ್ನದೇ ಆದ ಮಿತಿಗಳನ್ನು ಅರ್ಥಮಾಡಿಕೊಳ್ಳುವುದು, ಅದರ ಕುರಿತು ಅರಿವನ್ನು ಹೊಂದಿರುವುದು, ಅವುಗಳನ್ನು ಸಾಧ್ಯವಾದಷ್ಟು ಭೇದಿಸುವುದು ಹಾಗೂ ಹುಡುಗನಿಗೆ ಅದನ್ನು ಭೇದಿಸಲು ಸಹಾಯ ಮಾಡುವುದು. ಅಂತಹ ಶಿಕ್ಷಕರು ಈಗ ಇದ್ದಾರೆಯೇ? ನೀವು ಈಗಾಗಲೇ ಸೀಮಿತರಾಗಿದ್ದೀರಿ ಎಂದು ನೀವು ಹೇಳುತ್ತಿದ್ದೀರಿ.

**ಪೋ:** ದೈಹಿಕ, ಮಾನಸಿಕ, ಪರಿಸರದ ಮಿತಿಗಳ ಹೊರತಾಗಿಯೂ ಒಬ್ಬರು ಪ್ರಯತ್ನಿಸಬಹುದು.

**ಕೆ**: ಶಿಕ್ಷಕನು ತನ್ನ ಸ್ವಂತ ಮಿತಿಗಳನ್ನು ಸಾಧ್ಯವಾದ ಮಟ್ಟಿಗೆ ಮುರಿಯಬೇಕಾದ ಅಗತ್ಯವನ್ನು ಸ್ವತಃ ತಾನೇ ನೋಡದಿದ್ದರೆ, ಅವನು ಖಂಡಿತವಾಗಿಯೂ ಅವುಗಳನ್ನು ಮಗುವಿನ ಮೇಲೆ ಹೇರುತ್ತಾನೆ.

**ಪೋ**: ಅವನು ತನ್ನ ಮಿತಿಗಳನ್ನು ಮುರಿಯಲು ಸಿದ್ಧನಾಗಿರುತ್ತಾನೆ, ಆದರೆ ಅವನು ಎಷ್ಟೇ ಪ್ರಯತ್ನಿಸಿದರೂ ಅದು ಮತ್ತೆ ಸೀಮಿತವಾಗಿರುತ್ತದೆ.

**ಕೆ**: ಹಾಗಾದರೆ, ನೀವು ಏನು ಮಾಡಬೇಕೆಂದು ಸೂಚಿಸುತ್ತಿದ್ದೀರಿ? ನಿಮ್ಮೊಳಗಿರುವ ಮಿತಿಗಳನ್ನು ಮುರಿಯಲು ನಿಮಗೆ ಸಾಧ್ಯವಿದೆಯೇ?; ಇಲ್ಲದಿದ್ದರೆ ನೀವು ನಿಮ್ಮ ಪ್ರಭಾವದ ಮೂಲಕ ಮಿತಿಗಳನ್ನು

ಶಾಶ್ವತಗೊಳಿಸುತ್ತೀರಿ. ಪ್ರಬುದ್ಧ ಮಾನವರೆಂದು ಕರೆಯಲ್ಪಡುವ ನಾವು, ವಯಸ್ಕರಾಗಿ ನಮ್ಮ ಮಿತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ಮುರಿಯಲು ಸಿದ್ಧರಾಗಿದ್ದೇವೆಯೇ? ಮೊದಲನೆಯದಾಗಿ, ಪೋಷಕರಾಗಿ ಮತ್ತು ಶಿಕ್ಷಕರಾಗಿ, ನಾವು ನಮ್ಮ ಮಿತಿಗಳ ಕುರಿತು ಅರಿವನ್ನು ಹೊಂದಿದ್ದೇವೆಯೇ?

**ಪೋ**: ನಮ್ಮದೇ ಆದ ಮಿತಿಗಳಿವೆ. ಅವುಗಳಿಂದ ಹೊರಬರುವುದು ಹೇಗೆ ಎಂದು ನನಗೆ ತಿಳಿದಿಲ್ಲ.

**ಕೆ**: ಆ ಮಿತಿ ಎಂಬ ಪದವು ಏನನ್ನು ಸೂಚಿಸುತ್ತದೆ ಎಂಬುದು ನಮಗೆ ತಿಳಿದಿದೆಯೇ? ನಮ್ಮನ್ನು ನಾವು ಹಿಂದೂಗಳು ಎಂದು ಕರೆದುಕೊಳ್ಳುವುದು ಒಂದು ಮಿತಿಯಾಗಿದೆಯೇ?

**ಪೋ**: ಅದು ಮಿತಿಯಾಗಲು ಸಾಧ್ಯವಿಲ್ಲ.

**ಕೆ**: ಅದು ಮಿತಿಯೇ ಹೌದು, ಏಕೆಂದರೆ, ಅದು ಜನರನ್ನು ವಿಭಜಿಸುತ್ತದೆ. ಅದೆಲ್ಲವನ್ನೂ ಭೇದಿಸಲು ನಾವು ಸಿದ್ಧರಿದ್ದೇವೆಯೇ? ನಾನು ಒಬ್ಬ ಹಿಂದೂ ಅಥವಾ ಒಬ್ಬ ಮುಸ್ಲಿಂ ಆಗಿರುವುದಲ್ಲ.

**ಪೋ:** ಆ ಮಟ್ಟಕ್ಕೆ ಹೋಗಲು ಒಬ್ಬರು ಸಿದ್ಧರಾಗಿರಬಹುದು.

**ಕೆ:** ಶಿಕ್ಷಕರು, ಬೋಧಕರು ಹಾಗೆ ಮಾಡಲು ಸಿದ್ಧರಿದ್ದಾರೆಯೇ? ಅಂದರೆ, ಇದರ ಪರಿಣಾಮಗಳು ಅಗಾಧವಾಗಿವೆ. ಇಷ್ಟಕ್ಕೂ, ನೀವು ನಿಮ್ಮನ್ನು ಹಿಂದೂ ಎಂದು ಕರೆದುಕೊಂಡರೆ, ಅದರ ಅರ್ಥವೇನು? ಅದು ಕೇವಲ ಭೌಗೋಳಿಕ ವಿಭಜನೆ ಮಾತ್ರವಲ್ಲ, ಅದು ನಂಬಿಕೆಯಿಂದ ರಚಿಸಲ್ಪಟ್ಟ ಸಂಪೂರ್ಣ ವಿಭಜನೆ, ಅಲ್ಲವೇ? ಅಂದರೆ, ಕೆಲವು ರೀತಿಯ ಧರ್ಮಗಳಲ್ಲಿ, ಕೆಲವು ರೀತಿಯ ಸಂಪ್ರದಾಯಗಳಲ್ಲಿ, ಸಾಮಾಜಿಕ ಕ್ರಮದಲ್ಲಿ ನಂಬಿಕೆಯಿಲ್ಲದಿರುವುದು. ಶಿಕ್ಷಕರಾಗಿ ನಾವು ಅಷ್ಟು ದೂರ ಸಾಗಲು ಸಿದ್ಧರಿದ್ದೇವೆಯೇ? ಇದರರ್ಥ ನಾವು ನಿಜವಾಗಿಯೂ ಸಮಾಜವನ್ನು ಎದುರಿಸಬೇಕು ಎಂದಲ್ಲವೇ? ನಾವು ಹಾಗೆ ಮಾಡಲು ಸಿದ್ಧರಿದ್ದೇವೆಯೇ? ಶಿಕ್ಷಕನು, ತನ್ನನ್ನು ತಾನು ಶಿಕ್ಷಣಕ್ಕೆ ಅರ್ಪಿಸಿಕೊಳ್ಳದ ಹೊರತು, ಅವನು ಕೇವಲ ಅದರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾನೆ. ಶಿಕ್ಷಕನು, ಶಿಕ್ಷಣ ಎಂಬ ಪದಕ್ಕೆ ನಿಜವಾದ ಅರ್ಥವನ್ನು ಕೊಡುವುದೇ ಆದರೆ, ಅವನು ತನ್ನನ್ನು ತಾನು ಶಿಕ್ಷಣಕ್ಕೆ ಅರ್ಪಿಸಿಕೊಳ್ಳಬೇಕಲ್ಲವೇ? ಮತ್ತು ಪೋಷಕರು, ಶಿಕ್ಷಕನು ತನ್ನನ್ನು ತಾನು ಸರಿಯಾದ ಶಿಕ್ಷಣಕ್ಕೆ ಅರ್ಪಿಸಿಕೊಳ್ಳಲು ಸಹಾಯ ಮಾಡುತ್ತಾರೆಯೇ?

---

**ಕೃತಿ: ಭಯಮುಕ್ತವಾದ ಶಾಲೆ**

**ಮೂಲ: School without fear**

**ಅನುವಾದ: ವೀಣಾ ರಾವ್**

**ಮನಸ್ಸಿನಲ್ಲಿ ಸಂಘರ್ಷವಿಲ್ಲದಿದ್ದರೆ ಸ್ವಾತಂತ್ರ್ಯವಿರುತ್ತದೆ. ನಮ್ಮಲ್ಲಿ ಬಹಳಷ್ಟು ಮಂದಿ ಸಾಯುವತನಕ ಸಂಘರ್ಷಪೀಡಿತರು.**

**ಜೆ ಕೃಷ್ಣಮೂರ್ತಿ**

# RETREAT SCHEDULE – 2026

**March 12 - 15** **Living in the Grip of Fear – What does it doto you?**

**April 09 - 12** **Why do iget ANGRY?**



ನಾನು ನಿಮ್ಮೊಂದಿಗೆ ಮಾತನಾಡುತ್ತಿದ್ದೇನೆ, ಸಂಸ್ಥೆಗಳು ಅಥವಾ ವ್ಯಕ್ತಿಗಳ ಗುಂಪುಗಳೊಂದಿಗೆ ಅಲ್ಲ. ನಾನು ನಿಮ್ಮೊಂದಿಗೆ ಒಬ್ಬ ವ್ಯಕ್ತಿಯಾಗಿ ಮಾತನಾಡುತ್ತಿದ್ದೇನೆ, ಕೆಲವು ನಂಬಿಕೆಗಳನ್ನು ಹೊಂದಿರುವ ಜನರ ಗುಂಪಿನೊಂದಿಗೆ ಅಲ್ಲ. ನನ್ನ ನುಡಿಗಳ ಮೌಲ್ಯವನ್ನು ಗ್ರಹಿಸಬೇಕಾದರೆ, ಗುಂಪು, ಸಮೊಹ ಸನ್ನಿ ಪ್ರಜ್ಞೆಯೊಂದಿಗೆ ಅಲ್ಲ, ನೀವೇ ಸ್ವತಹ ಚಿಂತನೆಮಾಡಬೇಕು.

**ADYAR- 29TH DECEMBER – J KRISHNAMURTI**




*ಚಿಂತನೆ ನೋಡದೇ ಇರುವಾಗ ಈ ಬಿಡುಗಡೆ ಕಂಡುಬರುತ್ತದೆ; ಚಿಂತನೆ ಇಲ್ಲದೆ ನೋಡುವುದೆಂದರೆ ಖಾಲಿ ಅವಲೋಕನವಲ್ಲ; ವಿಕರ್ಷಣೆಯ ಗೈರು ಹಾಜರಿಯಲ್ಲ. ಚಿಂತನೆ ನೋಡದೇ ಇರುವಾಗ, ಅವಲೋಕನವಿರುತ್ತದೆ. ಅಲ್ಲಿ ಗುರುತಿಸುವಿಕೆ, ಹೋಲಿಕೆ, ಸಮರ್ಥನೆ ಹಾಗೂ ಖಂಡನೆಯ ಯಾಂತ್ರಿಕ ಪ್ರಕ್ರಿಯೆ ಇರುವುದಿಲ್ಲ; ಈ ನೋಟದಲ್ಲಿ ಮಿದುಳು ದಣಿಯುವುದಿಲ್ಲ. ಏಕೆಂದರೆ ಕಾಲದ ಎಲ್ಲ ಜಡವಾದ ಪ್ರಕ್ರಿಯೆಗಳು ಸ್ಥಗಿತಗೊಂಡಿರುತ್ತವೆ. ಪೂರ್ಣ ವಿಶ್ರಾಂತಿಯಿಂದಾಗಿ ಮಿದುಳು ತಾಜಾ ಆಗಿ ಪ್ರತಿಕ್ರಿಯೆ ನೀಡದೆ ಸ್ಪಂದಿಸುತ್ತದೆ; ಅವನತಿ ಹೊಂದದೆ ಬದುಕುತ್ತದೆ, ಸಮಸ್ಯೆಗಳ ಹಿಂಸೆಯಿಲ್ಲದೆ ಸಾಯುತ್ತದೆ. ಆಲೋಚನೆ ರಹಿತವಾಗಿ ನೋಡುವುದು ಅಂದರೆ ಕಾಲದ, ಜ್ಞಾನದ ಮತ್ತು ಸಂಘರ್ಷದ ಹಸ್ತಕ್ಷೇಪವಿಲ್ಲದೆ ನೋಡುವುದು ಎಂದರ್ಥ.*


Krishnamurti's Note Book: Rome 30th Sep

# ಹೊಸ ಪುಸ್ತಕಗಳ ಪ್ರಕಟಣೆ.


ಈ ಪುಸ್ತಕ Freedom from the Known ಈಗ ಹೊಸ ವಿನ್ಯಾಸದಲ್ಲಿ ಮರು ಮುದ್ರಣ ಕಂಡಿದೆ. ಅದರ ಜೋತೆಗೆ An Introduction to the teaching ಮತ್ತು The Urgency of Change ಕೃತಿಗಳು ಸಹ ಹೊಸದಾಗಿ ಪ್ರಕಟವಾಗಿವೆ. ಈ ಕೃತಿಗಳು ಎಲ್ಲಾ ಪುಸ್ತಕ ಮಳಿಗೆಯಲ್ಲಿ ಲಭ್ಯವಿರುತ್ತವೆ.




An Introduction To The Teaching




Freedom from the Known




The Urgency of Change

*ಜೆ. ಕೃಷ್ಣಮೂರ್ತಿ [೧೮೯೫-೧೯೮೬] ಸಾರ್ವಕಾಲಿಕ ಜಾಗತಿಕ ಶ್ರೇಷ್ಠ ತತ್ವಜ್ಞಾನಿ ಹಾಗೂ ಧಾರ್ಮಿಕ ಬೋಧಕ ಎಂದು ಮಾನ್ಯರು. ಆರು ದಶಕಗಳಿಗೂ ಹೆಚ್ಚುಕಾಲ ಅವರು ಜಗತ್ತಿನಾದ್ಯಂತ ಸಂಚರಿಸಿ ಓರ್ವ ಗೆಳೆಯನಂತೆ, ಗುರುವಿನ ಹಾಗಲ್ಲ, ಭಾಷಣಗಳನ್ನು ಮಾಡಿದ್ದಾರೆ, ಸಂವಾದಗಳನ್ನು ನಡೆಸಿದ್ದಾರೆ. ಅವರ ಬೋಧನೆಗಳು ಗ್ರಂಥಜ್ಞಾನ ಹಾಗೂ ಸಿದ್ಧಾಂತಗಳನ್ನು ಆಧರಿಸಿಲ್ಲ. ಆದುದರಿಂದಲೇ ಸದ್ಯದ ಜಾಗತಿಕ ಬಿಕ್ಕಟ್ಟು ಹಾಗೂ ಮಾನವನ ಇರವಿನ ಚಿರಂತನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳುವವರ ಜತೆ ಅವು ನೇರವಾಗಿ ಸಂವಹನ ಸಾಧಿಸುತವೆ.*

## *ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು 20% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು 40% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- * KFI ಪ್ರಕಟಿತ ಕನ್ನಡ ಪುಸ್ತಕಗಳು 50% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.



**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ॥ ಎಚ್. ಎಸ್. ರಾಘವೇಂದ್ರರಾವ್
ಪ್ರೊ॥ ಓ. ಎಲ್. ನಾಗಭೂಷಣ ಸ್ವಾಮಿ
ಡಾ॥ ವನಮಾಲಾ ವಿಶ್ವನಾಥ್

**Published by:**
Editor: Arun N Haunshi
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org